


ಪುಣ್ಯದೇಗುಲ ಹೆಬ್ಬೆ ಕ್ಷೇತ್ರವಿದ್ದು, ಒಂಟಿಯಾಗಿ ಹೋದ ಇವ್ನ ಮಹಿಮೆ ಮಾತ್ರ ಕುಂದಿಲ್ರೀ ಹಿಂದೆಈಗ್ಲೂ, 'ಏ ಈ ಬಾರಿ ಹೆಬ್ಬೆ ಜಾತ್ರೆಗೆ ಹೊರ್ಟಿದೀನಿ, ಯಾರ್ಯಾರ್ ಬರ್ತೀರಪ್ಪಾ?' ಅಂತ ಈ ಮನೆಯಿಂದ ನೆಂಟ್ರಿಗೆಲ್ಲಾ ಫೋನ್ ಕರೆ ಹೋಯ್ತಂದ್ರೆ ಆ ಮನೆಯಿಂದ ಇಪ್ಪತ್ತೈದು ಜನ ಅಂತೂ ರೆಡಿ. ತುಂಬಿ ಹರಿಯೋ ಭದ್ರಾ ಹಿನ್ನೀರಿನ ಮರದ ಸಂಕ ಬಿದ್ಹೋಗಿದ್ರೂ ಬೋಟಲ್ಲಿ ಹೋಗಿ, ಅಲ್ಲಿಂದ ಆನೆ, ಜಿಂಕೆ, ಕಡವೆ ಇತ್ಯಾದಿ ಪ್ರಾಣಿಗಳ ವಾಸಸ್ಥಾನವಾಗಿ ಅಭಯಾರಣ್ಯ ವ್ಯಾಪ್ತಿಯಲ್ಲಿರುವ ಸುಮಾರು ಒಂದೂವರೆ ಕಿ.ಮೀ. ದೂರದ ಬಿಮ್ಮೆನ್ನೋ ಬಯ್ಲಲ್ಲಿ 'ಏ, ಮಾತಾಡುಕಾಗ್ಲು, ಗಪ್ಚುಪ್ ಬನ್ನಿ' ಅನ್ನೋರ ಮಾತಿಗೆ ಉಸಿರು ಹಿಡಿದು ನಡೆದು ಹೆಬ್ಬೆ ಕ್ಷೇತ್ರ ಮುಟ್ಟಿ ದಿವ್ಯ ಹೋಮ, ಪೂಜೆಲ್ಲಿ ಧನ್ಯರಾಗೋದು ಸಾವಿರಾರು ಮಂದಿರೀ.

ಈ ಕಡೆ, ಹಿಂದೆಲ್ಲಾ, 'ಏನ್ರೀ ಬರೋ ಶುಕ್ರವಾರ ಗಾಡಿ ಕಟ್ಟಿಸ್ತೀರಾ, ಮಡವತ್ತಿ ಅಮ್ನೋರ ಸೇವೆ ಮಾಡ್ಬರಣ. ರಶ್ಮಿ, ಸುಂದ್ರೀ, ಲೀಲಮ್ಮನ ಮನ್ಯೋರೂ ಹೋಗಣಂತಿದಾರೆ. ಮುಂದಿನ್ವಾರ್ದಿಂದ ಹಬ್ಬದ್ ಸಾಲು, ರಾಶಿ ಕೆಲ್ಸ ಇರುತ್ತೆ' ಅಂತ ಸೀತಕ್ಕ ಹೇಳ್ತಿದ್ದಂತೆ ಪಾತ್ರೆಪಡಗ, ಅಡಿಗೆ ದಿನಸಿ, ಹಾಲು ಮೊಸ್ರು, ಪೂಜೆ ಸಾಮಾನು, ಅಮ್ನೋರಿಗೆ ಸೀರೆಕುಪ್ಪ ಎಲ್ಲ ತಯಾರಿ ನಡ್ದೇಬಿಡ್ತಿತ್ತು. ನಾಕೈದು ಕಿಲೋಮೀಟರ್ ಕಾಡಿನ ಗಿಡಗಂಟೆ ಮುಳ್ಳುಗಳ ಕಾಡು ಹಾದೀಲೇ ಚಪ್ಪಲಿಯೂ ಇಲ್ದೆ ಬರಿಗಾಲಲ್ಲಿ ನಡೀಬೇಕು ಈ ಸುಂದರ ಮಡವತ್ತಿಗೆ, ಈಗ ರಸ್ತೆಯಾಗಿದೆ.

'ಮಾರಾಯಾ, ಮೊದ್ಲು ನೀ ಒಲೆ ಹಚ್ಚಿ ಕಾಪಿ ಮಾಡು. ಕಾಡಲ್ಲಿ ನಡ್ಕಬಂದು ಎಲ್ರೂ ಕಣ್‌ಕಣ್ ಬಿಡ್ತಿದೀವಿ' ಅಂತಿದ್ದಾಗೆ ಕಾಡಿನಲ್ಲಿದ್ದ ಮೂರು ಕಲ್ಲು ಜೋಡ್ಸಿ, ಜುಗ್ಗು, ಪುರ್ಲೆ, ಒಣ್ಗಿದ್ದ ಮರದ್ ತುಂಡು ಎಲ್ಲ ತೂರಿ ಬೆಂಕಿ ಹಚ್ಚಿ ಕೊಳದಪ್ಪಲೆ ತುಂಬಾ ಮಾಡ್ತಿದ್ದ ಬೆಲ್ಲ ಹಾಕಿದ್ ಕಾಪಿ ಅನ್ನೋ ಕಷಾಯ ನಮ್ಗಂತೂ ಅಮೃತಾನೇ ಅಮ್ನೋರಿಗೆ ಅಭಿಷೇಕ, ಪೂಜೆ, ಮಂಗ್ಳಾರತಿ ನಂತ್ರ ಮಣ್ಣಿನ ನೆಲದಲ್ಲೇ ಬಾಳೆಲೆ ಹಾಕಿ ಅನ್ನ, ಹಲ್ಸಿನಕಾಯಿ ಹುಳಿ, ಕಡ್ಲೇಬೇಳೆ ಚಟ್ನಿ, ಅಕ್ಕಿಕಡ್ಲೇಬೇಳೆ ಪಾಯಸ, ನೀರು ಮಜ್ಜಿಗೆಯನ್ನ, ಅಬ್ಬಬ್ಬಾ, ಎಂಥಾ ರುಚೀರಿ ಆ ಅಡುಗೆಯಲ್ಲಿ, ಹಾಗೇ ಆ ಹಚ್ಚಹಸಿರಿನ ಕಾಡಲ್ಲಿ!

ಹೌದ್ರೀ, ನಮ್ಮೂರಿನ ಬೆಲ್ಲದ ಕಾಫಿ, ಹಸಿರಾದ ಮುತ್ತುಗದೆಲೆಯ ಮೇಲೆ ಬಿಸಿಬಿಸಿ ನುಚ್ಚಿನ ಗಂಜಿಯನ್ನ, ಅದಕ್ಕೆ ಮಿಡಿ ಉಪ್ಪಿನಕಾಯಿ,



ಮಾರಮ್ಮ ದೇವಿ

ದಿಂಡಿಗನಕಾಯಿ ಗೊಜ್ಜು, ಹುಣಿಸೇಹಣ್ಣಿನ ಗೊಜ್ಜು, ಮನೇಲೇ ಮಾಡಿದ ಭತ್ತ ಬೇಯಿಸಿ ಕುಟ್ಟಿದ ಅವಲಕ್ಕಿ, ಹುರಿದ ಅರಳು, ನೆಲದ ತುಂಬಾ ಬೆಳೀತಿದ್ದ ವಿಷ್ಣುಕಾಂತಿ, ಹೊನಗೊನ್ನೆ, ಗದ್ಮಾವು ಸೊಪ್ಪು, ಬಚ್ಚಲು ನೀರು ಹರಿವಲ್ಲಿ ಬೆಳೆದ ಕೆಸುವಿನ ಸೊಪ್ಪುಗೆಡ್ಡೆ, ಮಂದವಾದ ಹುರುಳಿಕಟ್ಟಿನ ಸಾರು, ಇಂಥಾದ್ದೇ ತಿನ್ನೋ ರುಚಿ ಉಂಡ ನಾಲ್ಗೆಗೆ ಗೊತ್ತು, ಒಂದಿನಕ್ಕೂ ಮಲಗ್ರಿರ್ಲಿಲ್ರೀ. ಅಜ್ಜಿ, ಅಮ್ಮಮಾಡೋ ಹೊನಗೊನ್ನೆ ಸೊಪ್ಪಿನ ಸಾರು ಕುದೀತಿದ್ರೆ, ಪಕ್ಕದಾಕೆ ಹಿಂಬದಿಯ ಮೋಟು ಗೋಡೆಯಾಚೆ ಬಗ್ಗಿ, 'ಇಕಾ, ಸೌಟು ಸಾರು ಹಾಕೆ ಮಾರಾಯ್ತಿ, ಈ ಮನ್ಸಂಗೆ ನೀ ಮಾಡಿದ್ ಮ್ಯಾಲಾಗ್ರಾ ಅಂದ್ರೆ ನೋಡು, ನಾಲ್ಗೆ ಚುಟುಗುಟ್ಟುತ್ತೆ...' ಅಂತ ಪಾತ್ರೆ ಕೈಯ್ಯಿಗ್ ಕೊಡ್ತಿದ್ರು.

ಆಟಕ್ಕೆ ಗೆಳ್ತೀರು, 'ಏ ನಿಮ್ಮನೆ ಮಾವಿನಮಿಡಿ ಉಪ್ಪಿನಕಾಯಿ, ಜೋನಿಬೆಲ್ಲ ತಾಂಬಾರೆ, ಕೆರೆ ದಡ್ಡಲ್ ಕೂತ್ಕಂಡ್ ಈ ಮಂಡಕ್ಕಿಗೆ ಸೇರ್ಸಿ ತಿನ್ನಣ' ಅಂದ್ರೆ ಸಾಕು, ನಾನು ಗುಡುಗುಡು ಓಡದೇ ಸೈ. ಇಂಥ ಸುತ್ತಲ ಹೆಮ್ಮೆಗಳನ್ನು ಹೊತ್ತ ನನ್ನೂರು ಮೊದ್ಲಿಗೆ ಬಂದೋರ್ಗೆಲ್ಲಾ ಅನ್ನವಿಕ್ಕಿ ಎಡೇಹಳ್ಳಿ ಆಗಿತ್ರೀ. ಒಂಥರಾ ಅದೃಷ್ಟ, ಮೈಸೂರರಸ ನರಸಿಂಹರಾಜ ಒಡೆಯರು ಶೃಂಗೇರಿಗೆ ಹೋಗುವ ಹಾದಿಯಲ್ಲಿ ಈ ಊರಿನಲ್ಲಿ ಕೆಲ ಗಂಟೆಗಳ ಆತಿಥ್ಯ ಸ್ವೀಕರಿಸಿದ್ರಂತೆ. ಹೀಗೆ ಒಡೆಯರು ಕಾಲಿಟ್ಟ ಹಳ್ಳಿ ಅವರ ಹೆಸರಿಂದ ನರಸಿಂಹರಾಜಪುರ ಆಗಿದ್ದು ನಮ್ಗಂತೂ ರೋಚಕ ಇತಿಹಾಸ.

ಇನ್ನು ಬ್ರಿಟಿಷರು ಆ ಕಾಲ್ದಲ್ಲಿ ನಮ್ಮೂರ ಸುತ್ತಲಿದ್ದ ದಟ್ಟಕಾಡಿನ ಮರಮುಟ್ಟು ಕೊಳ್ಳೆಹೊಡ್ಯಕ್ಕೆ ತರೀಕೆರೆ ಎಂಬ ಊರಿನಿಂದ ನನ್ನೂರಿಗೆ ರೈಲೂ ಹಾಕಿದ್ರು. ಕುಂಟ್ಕಂಡು ಬರೋ ಆ ರೈಲು ನಾ ನೋಡ್ಲಿಲ್ಲ, ಹಳಿಗಳಂತೂ ಇಂದೂ ಇವೆ. ಇದ್ರಲ್ಲಿ ಒಮ್ಮೆ ಅನಕೃ ಬಂದ್ರಂತೆ ನಮ್ಮೂರ್ಗೆ. 'ತರಿಕೆರೇಲಿ ಚಿಕ್ಕೋನಾದ ಮಗಂಗೆ ಟಿಕೆಟ್ ಬೇಡಾ ಅಂದ್ರು, ನರಸಿಂಹರಾಜಪುರದಲ್ಲಿಳಿದಾಗ ಮಗ ದೊಡ್ಡೋನಾಗಿದ್ದ, ಟಿಕೆಟ್ ಕೇಳಿದ್ರು ಎಂದು ಹಾಸ್ಯ ಮಾಡಿದ್ದುಂಟು ಕಣ್ರೀ ಈ ರೈಲಿತಿಹಾಸ ಇತ್ತೀಚೆಗೆ ಶತಾಯುಷ್ಯವನ್ನೂ ಆಚರಿಸಿಕೊಳ್ತು.

ಮಲೆನಾಡ ಮಳೆ ವೈಶಿಷ್ಟ್ಯ ಕೇಳ್ಬೇಕಾ, ಅದು ಹನಿಕಡಿಯದ ದಬದಬನೆ ಬೀಳುವ ಕುಂಭದ್ರೋಣ ಮಳೇರೀ. ಈ ಮಳೆಗೆ ನಾವಂತೂ ಹೆದರದೇ ಅಡ್ಡಾಡ್ತಿದ್ವಿ. ಮನೆಯಂಗಳದ ಸೂರಿನ ಹೆಂಚಿನ ತುದಿಯಲ್ಲಿ ಮುತ್ತಿನ ದಾರ್ದಂತೆ ಒಂದೇ ಸಮ ಬೀಳ್ತಿದ್ದ ಮಳೆ ನೀರಿಗೆ ಇಬ್ಭಾಗವಾಗಿ ಸೀಳಿದ ಅಡಿಕೆ ಮರದ ಕಾಂಡವನ್ನ ದೋಣಿ ಥರ ಕಟ್ಟಿ, ಸೂರಿನ ನೂರ್ ಎಳೆಗಳೂ ಸೇರಿ, ದಬದಬನೆ ಕೆಳಗಿಟ್ಟ ದೊಡ್ಡ ಕಾವಳಿಗೆಗೆ ಸುರಿವಾಗ ಅದರ ಸಂಗೀತ ಕೇಳಬೇಕ್ರೀ, ಪಾತ್ರೆ, ಕೈಕಾಲು ತೊಳೆಯಲು ಇದೇ ನೀರು ಬಳಸ್ತಾ ಸದುಪಯೋಗವೂ ಮಾಡ್ತೀವಿ.

ಹಬ್ಬಗಳು, ದೇವಸ್ಥಾನಗಳು ನಮ್ಮೂರಿನ ಆತ್ಮ ಅಂದ್ರೆ ನಿಮ್ಗೆ ಅದರ ಮಹತ್ವ ಅರ್ಥವಾಗುತ್ತಲ್ವಾ? ಬಹಳ ಸರಳವಾಗಿದ್ರೂ, ಭರಪೂರ ಭಕ್ತಿ, ಶ್ರದ್ಧೆ, ಸಂಭ್ರಮ ತುಂಬ್ತಾವೆ ಕಣ್ರೀ. ಗೌರಿಹಬ್ಬದ ಸಾಮೂಹಿಕ ಪೂಜೆಲ್ಲಿ, 'ಹೆಂಗಸ್ರಿಗೆಲ್ಲ ಕುಂಕ್ಮ ಕೊಟ್ಟು, ಹಿಡೀ, ಈ ಕಡ್ಲೇಕಾಳು, ಕೋಸಂಬ್ರಿ ಕೊಡು ಸುಂದ್ರಮ್ಮ ಮನ್ಗೆ ಬಂದ್ರಾ ಕೊಪ್ಪಿಂದ?... ಎಂತದೇ ಇಷ್ಟಂದು ತೆಗ್ದು ಹೋಗಿದೀ, ಜರ ಬಿಡ್ತೋ ಇಲ್ವೋ' ಇಂಥ ಮಾತುಗಳಲ್ಲಿ ಎಷ್ಟು ಕಳಕಳಿ ಇರುತ್ರೀ. ನವರಾತ್ರೀಲಿ ನಾವು ಹುಡ್ಗೀರು ಮನೆಮನೆಗೆ ಹೋಗಿ, 'ಗೊಂಬೆ ಇಟ್ಟೆದೀರಾ...? ಕೋಲಾಟ ಆಡಿಸ್ತೀರಾ..?' ಎಂದು ಕೇಳಿ ಆಡ್ತಿದ್ವಿ, ಅವ್ರು ಕೊಡೋ ದುಡ್ಡಿಂದ ರಿಬ್ಬನ್ನು, ಬಳೆ ತಗೋತಿದ್ದದ್ದು ನೆನಪಾಗತ್ತೆ, ಅಷ್ಟು ಚಂದ. ಗಂಡುಮಕ್ಳು 'ಬಸವನ ಅಮಾಸೇಲಿ' ತಾವೇ ಮಾಡ್ಕಂಡ ಮರಕಾಗ್ದದ ಚಂದದ ತೇರಲ್ಲಿ ಜೋಡು